ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 12/10/20

### ಸುಧಾಕರ್‌ಗೆ ಆರೋಗ್ಯ, ರಾಮುಲುಗೆ ಸಮಾಜ ಕಲ್ಯಾಣ

# ಇಬ್ಬರು ಸಚಿವರ ಖಾತೆ ದಿಢೀರ್ ಬದಲು?

### ಶ್ರೀರಾಮುಲು ಆರೋಗ್ಯ ಖಾತೆ ವೈದ್ಯಕೀಯ ಶಿಕ್ಷಣ ಸಚಿವ ಸುಧಾಕರ್‌ಗೆ ಡಿಸಿಎಂ ಕಾರಜೋಳ ಬಳಿಯಿದ್ದ ಸಮಾಜ ಕಲ್ಯಾಣ ಖಾತೆ ಶ್ರೀರಾಮುಲುಗೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಆರಂಭಗೊಂಡ ಬಳಿಕ ಉದ್ಭವಿಸಿದ್ದ ಆರೋಗ್ಯ ಇಲಾಖೆಯ ಸಮನ್ವಯದ ಸಮಸ್ಯೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೊನೆಗೂ ಪರಿಹಾರ ಕಂಡು ಹಿಡಿದಿದ್ದಾರೆ. ಖುದ್ದು ವೈದ್ಯರಾಗಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಬಿ.ಶ್ರೀರಾಮುಲು ಬಳಿಯಿರುವ ಆರೋಗ್ಯ ಖಾತೆ ಹೊಣೆಯನ್ನೂ ವಹಿಸಲಿದ್ದು, ಶ್ರೀರಾಮುಲುಗೆ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಬಳಿ ಇರುವ ಸಮಾಜ ಕಲ್ಯಾಣ ಖಾತೆ ಜವಾಬ್ದಾರಿ ನೀಡಲು ಮುಖ್ಯಮಂತ್ರಿಗಳು ತೀರ್ಮಾನಿಸಿದ್ದಾರೆ. ಈ ಬದಲಾವಣೆ ಸಂಬಂಧ ಸೋಮವಾರ ಅಧಿಕೃತ ಆದೇಶ ಹೊರಬೀಳಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಅಂದರೆ, ಇನ್ನುಮುಂದೆ ಡಾ।ಕೆ. ಸುಧಾಕರ್ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಹಾಗೂ ವೈದ್ಯಕೀಯ ಶಿಕ್ಷಣ ಖಾತೆಗಳೆರಡನ್ನೂ ನಿಭಾಯಿಸಲಿದ್ದಾರೆ.

➘ 7





## ಕೊರೋನಾ ಗೊಂದಲ ನಿವಾರಣೆಗೆ ಈ ಕ್ರಮ

- ಆರೋಗ್ಯ, ವೈದ್ಯಕೀಯ ಶಿಕ್ಷಣ ಬೇರೆ ಬೇರೆಯವರ ಬಳಿ ಇದ್ದ ಕಾರಣ ಕೊರೋನಾ ನಿರ್ವಹಣೆಗೆ ಸಮನ್ವಯ ಕೊರತೆ
- ಇದರಿಂದಾಗಿ ಸಾಕಷ್ಟು ಗೊಂದಲ, ಮಾಹಿತಿ ನೀಡಿಕೆಯಲ್ಲೂ ಸಮಸ್ಯೆ. ಸಾರ್ವಜನಿಕ ವಲಯದಲ್ಲಿ ಈ ಬಗ್ಗೆ ತೀವ್ರ ಟೀಕೆ
- ಬಳಿಕ ಬೆಂಗಳೂರಿನ ಉಸ್ತುವಾರಿ ಸುಧಾಕರ್‌ಗೆ, ರಾಜ್ಯದ ಇತರೆಡೆಯ ನಿರ್ವಹಣೆ ರಾಮುಲುಗೆ ನೀಡಿದ್ದ ಮುಖ್ಯಮಂತ್ರಿ
- ಈ ಬದಲಾವಣೆ ಮಾಡಿದರೂ ಕಡಿಮೆ ಯಾಗದ ಹೊಂದಾಣಿಕೆ ಸಮಸ್ಯೆ. ಅಲ್ಲದೆ, ಇದರಿಂದ ಮುನಿಸಿಕೊಂಡಿದ್ದ ರಾಮುಲು
- ಎರಡೂ ಇಲಾಖೆಗಳ ತಿಕ್ಕಾಟಕ್ಕೆ ಅಂತ್ಯ ಹಾಡುವ ಸಲುವಾಗಿ ಸ್ವತಃ ವೈದ್ಯರಾಗಿರುವ ಸುಧಾಕರ್‌ಗೆ ಆರೋಗ್ಯ ಖಾತೆ ಹೊಣೆ
- ಸಚಿವ ಶ್ರೀರಾಮುಲು ಅವರಿಗೆ ಪ್ರಮುಖವಾದ ಸಮಾಜ ಕಲ್ಯಾಣ ಖಾತೆ. ಪಿಡಬ್ಲ್ಯುಡಿ ನಿರ್ವಹಿಸಲಿರುವ ಕಾರಜೋಳ

# ಇಬ್ಬರು ಸಚಿವರ ಖಾತೆ ಬದಲಾವಣೆ?

ಮೊದಲ ಪುಟದಿಂದ

ಶ್ರೀರಾಮುಲು ಅವರು ಈಗಿರುವ ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಜೊತೆಗೆ ಸಮಾಜ ಕಲ್ಯಾಣ ಖಾತೆಯ ಜವಾಬ್ದಾರಿಯ ವಹಿಸಿಕೊಳ್ಳಲಿದ್ದಾರೆ. ಗೋವಿಂದ ಕಾರಜೋಳ ಅವರಿಗೆ ಲೋಕೋಪಯೋಗಿ ಖಾತೆಯ ಹೊಣೆ ಮುಂದುವರೆಯಲಿದೆ. ಕೋವಿಡ್-19 ನಿರ್ವಹಣೆಗೆ ಸಂಬಂಧಿಸಿದಂತೆ ಹಿಂದೆಯೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳ ನಡುವೆ ಸಮನ್ವಯದ ಕೊರತೆ ಉಂಟಾಗಿ ಸಾಕಷ್ಟು ಸಮಸ್ಯೆ ಸೃಷ್ಟಿಯಾಗಿತ್ತು. ಎರಡೂ ಇಲಾಖೆಗಳ ನಡುವೆ ಸಮನ್ವಯ ಅತ್ಯಗತ್ಯವಾಗಿದ್ದರೂ ಬೇರೆ ಬೇರೆ ಸಚಿವರ ಬಳಿ ಖಾತೆ ಇದ್ದುದರಿಂದ ಹೊಂದಾಣಿಕೆ ಕಷ್ಟವಾಗಿತ್ತು. ಈ ಬಗ್ಗೆ ಸಾಕಷ್ಟು ಟೀಕೆ ಕೂಡ ಕೇಳಿಬಂದಿತ್ತು. ಆರಂಭದಲ್ಲಿ ಕೋವಿಡ್ ನಿರ್ವಹಣೆ ಕುರಿತಂತೆ ಗೊಂದಲ ಉಂಟಾಗುತ್ತಿದ್ದಂತೆಯೇ ಸುಧಾಕರ್ ಅವರಿಗೆ ಬೆಂಗಳೂರಿನ ಉಸ್ತುವಾರಿ ಮತ್ತು ಶ್ರೀರಾಮುಲುಗೆ ರಾಜ್ಯದ ಇತರ ಭಾಗಗಳಲ್ಲಿನ ಉಸ್ತುವಾರಿ ನೀಡಲಾಗಿತ್ತು. ಆದರೂ ಗೊಂದಲ ಹೆಚ್ಚುತ್ತಲೇ ಹೋಗಿತ್ತು.

ಇದೀಗ ಎರಡೂ ಇಲಾಖೆಗಳ ನಡುವಿನ ತಿಕ್ಕಾಟಕ್ಕೆ ಅಂತ್ಯ ಹಾಡುವ ಉದ್ದೇಶದಿಂದ ಮತ್ತು ಸ್ವತಃ ವೈದ್ಯರಾಗಿರುವುದರಿಂದ ಸುಧಾಕರ್ ಅವರಿಗೇ ಹೆಚ್ಚಿನ ಜವಾಬ್ದಾರಿ ನೀಡುವುದು ಸೂಕ್ತ ಎಂಬ ನಿಲುವಿಗೆ ಯಡಿಯೂರಪ್ಪ ಬಂದಿದ್ದಾರೆ.